ಅತ್ತ. 'ನೀನು ಗಂಡುಮಗಾಗಿ ಹುಟ್ಟಿದ್ದಕ್ಕ ಬೋಳ್ಯಾದೆ.' ಅಂತ ಅಭಿಮ್ಯಾಗ ಸಿಟ್ಟುಬಂದ್ರು ಅದಕ್ಕೇನು ಗೊತ್ತು ಹಸುಗೂಸಂತ ತಾಯಿಕಳ್ಳು ತಡಿಲಾರದ ರಮಿಸಿ ಎದಿಗೆ ಬಡಕಂದು ಹಗಲುರಾತ್ರಿ ಮನೆ ಸೇರಿದಾಕಿ ಹೊರಗ ಕಾಲಿಡಲಿಲ್ಲ. ಮುಚ್ಚಿದ ಬಾಗಿಲು ಮುಚ್ಚಿದಂಗಿತ್ತು. ನಿಲುಗನ್ನಡಿಗೆ ಬೋಳ್ಯಾದ ದಿನನೇ ಪರದೆ ಎಳ್ದು ಕಿಟಕಿಂದ ಅಗಸಿ ನೋಡುತಿದ್ದೆ. ಆ ಕೂದಲೆಣ್ಣೆ ಮಾರುವವನು ಅಗಸಿಮುಂದ ದಿನಬಂದು ಈಕಡೆ ನೋಡಿದ್ದೇ ನೋಡಿದ್ದು... ಬೋಳ್ಯಾಗಿದ್ದು ಗೊತ್ತಾಗಿರಬೇಕು. ಆತನ ಮುಖ ಸಪ್ಪಗಾಗಿತ್ತು. ಮೈಯ್ಯಾಗ ಹುರುಪು ಇಲ್ದವನಂಗಿದ್ದ. ಎರಡು ಕಣ್ಣು ಬರಗೆಟ್ಟು ಹುಡುಕಾಡುತಿದ್ವು. ಸಣ್ಣೀರವ್ವ, ಸುಟ್ಟಿ 'ಸವಿತಕ್ಕ, ಬೋಳಿ ಹೆಂಗಆಗ್ಯಾಳ... ಹೆಂಗಆಗ್ಯಾಳ..' ಅಂತ ಹಗಲನ್ನೆರಡು ತಾಸು ಮನೆಕಡೆ ಸೀರೆತ್ತಿ ನೋಡುತಿದ್ರು. ಅವ್ರು ಮಾಡೋದೆಲ್ಲಾ ಕಿಟಕಿಯಿಂದ ಎಲ್ಲಾ ಕಾಣುತಿತ್ತು. ಗಂಡನಂಬೋದು ಹೊತ್ತುಗೊತ್ತಿಲ್ದ ಹುಚ್ಚ ಬಂದಂಗ ಆಗಾಗ ಬರುತಿತ್ತು. ಉಣ್ಣಾಕ ನೀಡಂತ ಲುಂಗಿ ಏರಿಸಿ ನಿಲ್ಲುತಿದ್ದ... ಎಷ್ಟು ಕೇಳಿದ್ರು ಉಣ್ಣಾಕ ನೀಡ್ತಿರಲಿಲ್ಲ. ಬೇಕಾದ್ರ ನೀನೆ ನೀಡಿಕೆಂದು ತಿನ್ನಂತ ಗಂಗಾಳ, ಚೆಂಬುನ ಸುಮ್‌ಸುಮ್ನೆ ಕುಟ್ಟಿ ನನ್‌ಪಾಡಿಗೆ ನಾನಿರುತಿದ್ದೆ. ಒಂದೊಂದ್ಸಲ 'ಯಾಕ್ ಸೆಟ್ಕಂಡು ಕುಂದ್ರಿತಿ ನಿಮ್ಮೌನ್ ತುಡುಗು ರಂಡ್ಯಾ ಒತ್ತಿನೋಡ್...' ಅಂತ ಕಾಲು ಎತಿಗಂಡೇ ಬರುತ್ತಿದ್ದ. ಏನು ಮಾಡಿದ್ರು ಬಗ್ಗುತ್ತಿರಲಿಲ್ಲ. ಮೊಂಡು ಗೂಟಾಗಿ ಹಂಗ ನಿಲ್ಲುತಿದ್ದೆ.

ಅವತ್ತೊಂದಿನ ಮುಟ್ಟಾಗಿ ಹೊಟ್ಟೆ ಕಡಿತಿತ್ತು. ಕಾಲು ಸೇದಿದಂಗಾಗಿ ಬೇಗ ಮಲಗಬೇಕನಿಸ್ತು. ಜಗಲಿಗಿದ್ದ ಅಕ್ಕಮಾದೇವಿಗೆ ದೀಗಿ ಮುಡಿಸೋದು ನೆಪ್ಪಾಗಿ, ಮೈಲಿಗೆ ದಿನ ಜಗಲಿಗೆ ಹೋಗಬರ್ದಂತ ಹಂಪವ್ವನ ಮಗಳು ತಿಮ್ಮಿನ ಕೂಡ ದೀಗಿ ಮುಡಿಸಿದೆ. ಅಕ್ಕಮಾದೇವಿ ಫೋಟದ ಬಗಲಿದ್ದ ಉರುಕುಂದಿ ಈರಣ್ಣನ ಫೋಟನೋಡಿ ಹಲ್ಲು ಕಡಿಯುತ್ತಲೇ ಜಲ್ದಿ ಮಲಿಗಿದೆ.

